**ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಘನ ನ್ಯಾಯಾಲಯ ಬ್ಯಾಡಗಿ.**
**ಕ್ರಿಮಿನಲ್ ಪ್ರಕರಣ ಸಂಖ್ಯೆ: 144/2019**

ಪಿಡಬ್ಲ್ಯೂ: 13

ಸಿಡಬ್ಲ್ಯೂ: 12

ಹೆಸರು : ಮಂಜುನಾಥ ಶೇಖಪ್ಪ ಕಲ್ಲೇದೇವರು

ವಯಸ್ಸು : 44 ವರ್ಷ

ಉದ್ಯೋಗ : ಪಿ ಎಸ ಐ

ವಾಸಸ್ಥಳ : ಜಿಲ್ಲಾ ಪೊಲೀಸಠಾಣೆ ದಾವಣಗೆರೆ

ದಿನಾಂಕ : 03.07.2025 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ :**

ದಿಃ 06.01.2018 ರಿಂದ 26.06.2019 ರವರೆಗೆ ಹಾವೇರಿ ಜಿಲ್ಲಾ ಪೊಲೀಸ ಕಚೇರಿಯಲ್ಲಿ ಪೊಲೀಸ ಉಪನಿರೀಕ್ಷರು ಮತ್ತು ಬೆರಳು ತಜ್ಞ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 20.12.2018 ರಂದು ಮಧ್ಯಾಹ್ನ 01.50 ಕ್ಕೆ ಹಾವೇರಿ ಕಂಟ್ರೋಲ್ ರೂಮ್ ಮೂಲಕ ಬ್ಯಾಡಗಿ ಪೊಲೀಸಠಾಣೆಯಿಂದ ದೂರವಾಣಿ ಕರೆಯ ಮೂಲಕ ಬ್ಯಾಡಗಿ ಪೊಲೀಸಠಾಣೆ ಸಂಖ್ಯೆ 247/2018 ನೇದ್ದರಲ್ಲಿ ಹಾಜರಾಗಲು ತಿಳಿಸಿದ್ದು ಅದರಂತೆ ನಾನು ಮತ್ತು ನಮ್ಮ ಸಿಬ್ಬಂದಿಯವರು ಅಪರಾಧ ಸ್ಥಳಕ್ಕೆ ಬೇಟಿಯಾಗಿ ಕುಲಂಕುಶವಾಗಿ ವೈಜ್ಞಾನಿಕವಾಗಿ ಪರಿಶೀಲಿಸಿ ಎರಡು ಆಕಸ್ಮಿಕ ಬೆರಳು ಮುದ್ರೆಗಳನ್ನು ಗ್ಲಾಸ್ ಶೋಕೇಶ ಮೇಲೆ ವೃದ್ದಿಸಿ ಅವುಗಳನ್ನು ಎ ಮತ್ತು ಬಿ ಎಂದದು ಗುರುತಿಸಿಕೊಂಡು ಪಾರದರ್ಶಕ ಪ್ಲಾಸ್ಟಿಕ ಹಾಳೆಗೆ ಸ್ಥಳಾಂತರಿಸಿಕೊಂಡು ಹಾಗೂ ಪಿರ್ಯಾದಿಯ ಮತ್ತು ಅಂಗಡಿಯ ಕೆಲಸಗಾರರ ಬೆರಳು ಮುದ್ರೆಗಳನ್ನು ಪಡೆದು ಮುಂದಿನ ಕ್ರಮಕ್ಕಾಗಿ ಬೆರಳು ಮುದ್ವೆ ಘಟಕಕ್ಕೆ ತಂದಿರುತ್ತೇನೆ. ನಂತರ ಸದರಿ ಎ ಮತ್ತು ಬಿ ಎಂದು ಗುರುತಿಸಿದು

ಆಕಸ್ಮಿಕ ಬೆರಳು ಮುದ್ರೆಗಳನ್ನು ಪಿರ್ಯಾದಿ ಮತ್ತು ಅಂಗಡಿಯ ಕೆಲಸಗಾರರ ಬೆರಳು ಮುದ್ರೆಗಳಿಗೆ ಹೋಲಿಕೆ ಮಾಡಿ ನೋಡಲಾಗಿ ಬಿ ಎಂದು ಗುರುತಿಸಿದ ಆಕಸ್ಮಿಕ ಬೆರಳು ಮುದ್ರೆಯು ಚಾಸಾ-01 ನೇದ್ದವರ ಬಲಗೈ ಹೆಬ್ಬೆರಳಿನ ಮುದ್ರೆಗೆ ಹೋಲಿಕೆಯಾಗಿರುತ್ತದೆ. ಎ ಎಂದು ಗುರುತಿಸಿದ ಮುದ್ರೆಯು ಆಕಸ್ಮಿಕ ಬೆರಳು ಮುದ್ರೆಯು ಹೊಲಿಕೆ ಆಗಿರುವುದಿಲ್ಲಾ. ನಂತರ ಎ ಎಂದು ಗುರುತಿಸಿದ ಆಕಸ್ಮಿಕ ಬೆರಳು ಮುದ್ರೆಯನ್ನು ಗಣಕಯಂತ್ರದ ಮೂಲಕ ಎ ಎಫ ಐ ಎಸ ತಂತ್ರಾಂಶದಲ್ಲಿ ಶೋಧಿಸಿದ್ದು ಪತ್ತೆಯಾಗಿರುವುದಿಲ್ಲಾ. ತದನಂತರ ಎ ಬೆರಳು ಮುದ್ರೆಯನ್ನು ಗಣಕ ಯಂತ್ರದ ತಂತ್ರಾಂಶದಲ್ಲಿ ಎ ಎಪ ಐ ಎಸ ನಲ್ಲಿ ದಾಖಲು ಮಾಡಿರುತ್ತೇನೆ.

ದಿಃ 07.01.2019 ರಂದು ಪೊಲೀಸ ಉಪ ನಿರೀಕ್ಷರು ಬ್ಯಾಡಗಿ ರವರು ಸದರಿ ಪ್ರಕರಣದಲ್ಲಿ ದಸ್ತಗಿರಿ ಮಾಡಿದ ಎರಡು ಜನ ಆರೋಪಿತರ ಬೆರಳು ಮುದ್ರೆ ಪ್ರ ಪತ್ರಗಳನ್ನು ಸದರಿ ಪ್ರಕರಣಗಳಲ್ಲಿ ದೊರೆತ ಆಕಸ್ಮಿಕ ಬೆರಳು ಮುದ್ರೆಗಳಿಗೆ ಪರಿಶೀಲಿಸಿ ಮಾಹಿತಿ ನೀಡುವಂತೆ ಪತ್ರ ಬರೆದಿರುತ್ತಾರೆ. ಅದೇ ದಿನ ಸದರಿ ವ್ಯಕ್ತಿಗಳ ಬೆರಳು ಮುದ್ರೆ ಪ ಪತ್ರಗಳನ್ನು ಎ ಎಪ ಐ ಎಸ ತಂತ್ರಾಂಶದಲ್ಲಿ ಶೋಧಿಸಿದಾಗ ಸದರಿ ಪ್ರಕರಣದಲ್ಲಿ ದೊರೆತ ಎ ಎಂದು ದೊರೆತ ಆಕಸ್ಮಿಕ ಬೆರಳು ಮುದ್ರೆಯು 1ನೇ ಆರೋಪಿತನ ಎಡಗೈ ಹೆಬ್ಬೆರಳಿನ ಮುದ್ರೆಗೆ ಅನ್ಯೂನ್ಯವಾಗಿ ಹೊಂದಾಣಿಕೆ ಆಗಿರುತ್ತದೆ. ಸದರಿ ಆರೋಪಿಯ ಬೆರಳು ಮುದ್ರೆ ವರ್ಗಿಕರಣ ಸಂಖ್ಯೆ 9/20 R/W OOO/OOI26-20 ಅಂತಾ ಮತ್ತು ಬೆರಳು ಮುದ್ರೆ ಪ ಪತ್ರದ ಸಿ ಓ ಐಡಿ ನಂಬರ KS 43906a005227 ಆಗಿರುತ್ತದೆ. ಆಕಸ್ಮಿಕ ಬೆರಳು ಮುದ್ರೆಯು ಆರೋಪಿಯ ಬೆರಳು ಮುದ್ರೆಗೆ ಹೊಂದಾಣಿಕೆ ಆಗಿರುತ್ತದೆ. ಈ ಬಗ್ಗೆ ವರದಿ ಮತ್ತು ಪ್ರಮಾಣಪತ್ರ ನೀಡಿರುತ್ತೇನೆ. ಬ್ಯಾಡಗಿ ಠಾಣೆಯವರು ಬರೆದ ಪತ್ರ ಮತ್ತು ವರದಿಯ ಹಾಗೂ ಪ್ರಮಾಣಪತ್ರಗಳನ್ನು ಈಗಾಗಲೇ ನಿಪಿ-43

ರಿಂದ 48 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಗಳನ್ನು ನಿಪಿ–43(ಬಿ), 44(ಎ), 45(ಎ), 46(ಎ), 47(ಎ) ಮತ್ತು 48(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :**

ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಕಾಲಾವಕಾಶ ಕೋರಿದ್ದರಿಂದ ಮುಂದುಡಲಾಯಿತು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೆ ಕೆ ಸ ಅದೆ.

Sd/-
ಜೆಎಂಎಫ್‌ಸಿ, ಬ್ಯಾಡಗಿ.